ಕಾರ್ಖಾನೆಗಳ ಕಾರ್ಮಿಕರ ಹರತಾಳದ ಬಗ್ಗೆ

೮೫೭. (೫) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).— ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಹಂಬ್ಲಳ್ಳಿ ವ್ಯಾಪ್ತಿಯಲ್ಲಿಯ ಅನೇಕ ಕಾರ್ಖಾನೆಗಳ ಕಾರ್ಮಿಕರು ಅವರ ಅನೇಕ ಬೇಡಿಕೆಯ ಬಗ್ಗೆ ಹರತಾಳ ವಗೈರೆ ಬಹಳ ದಿನಗಳಿಂದ ನಡೆಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಯಾವ ಕ್ರಮ ತೆಗೆದುಕೊಂಡಿರುವುದು ?

ಇ) ಈ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಉತ್ಪಾದನೆಯ ಮೇಲೆ ಪರಿಣಾಮವಾಗುವುದು ಸರಕಾರದ ಆದಾಯದಲ್ಲಿ ಕಡಿತವಾಗುವುದು ಸರ್ಕಾರದ ಗಮನದಲ್ಲಿದೆಯೆ ? ಇದರಿಂದ ಮುಂಬರುವ ಉದ್ದಿಮೆ ಸ್ಥಾಪಿಸುವ ಉದ್ದಿಮೆದಾರರು ಹಿಂದೇಟು ಹಾಕುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ) ಎರಡು ಕಾರ್ಖಾನೆಗಳಲ್ಲಿ ಮುಷ್ಕರ ಹಾಗೂ ಒಂದು ಕಾರ್ಖಾನೆಯಲ್ಲಿ ಹೊರಗೀಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕಾರ್ಮಿಕ ಇಲಾಖೆಯವರು ಮಧ್ಯೆ ಪ್ರವೇಶಿಸಿ ಸಂಧಾನ ಕ್ರಮ ತೆಗೆದುಕೊಂಡು ವಿವಾದ ಬಗೆಹರಿಸುವ ಪ್ರಯತ್ನ ನಡೆಸಿದ್ದಾರೆ.

ಇ) ಕೇವಲ ಉತ್ಪಾದನೆ ಹಾಗೂ ಸರ್ಕಾರಕ್ಕೆ ಬರುವ ಆದಾಯದ ಮೇಲೆ ಆಗುವ ಪರಿಣಾಮವನ್ನು ಗಮನದಲ್ಲಿರಿಸಿಕೊಂಡು ಮತ್ತು ಮುಂಬರುವ ಉದ್ದಿಮೆ ಸ್ಥಾಪಿಸುವ ಉದ್ದಿಮೆದಾರರ ಹಿಂದೇಟನ್ನು ಗಮನದಲ್ಲಿರಿಸಿಕೊಂಡು, ಕಾರ್ಮಿಕರ ಬೇಡಿಕೆಗಳು ಹಾಗೂ ಸಂಬಂಧಪಟ್ಟ ಕಾಯಿದೆಗಳಡಿಯಲ್ಲಿನ ವಿಧಿಗಳನ್ನು ಉಪೇಕ್ಷಿಸಲು ಆಗುವುದಿಲ್ಲ. ಆದರೂ ಸಹ, ಅವಶ್ಯಕತೆ ಕಂಡುಬಂದಾಗ ಸರ್ಕಾರ ಮಧ್ಯೆ ಪ್ರವೇಶಿಸಿ ಕಾರ್ಮಿಕರ ಮುಷ್ಕರ ಹಾಗೂ ಆಡಳಿತವರ್ಗದವರ ಬಿಗುಮಂದ್ರೆ ನಿಷೇದಿಸಿ ಕಾರ್ಮಿಕ ವಿವಾದಗಳನ್ನು ಬಗೆಹರಿಸುವ ಪ್ರಯತ್ನಗಳನ್ನು ಮುಂದುವರೆಸಿದೆ.

ರಾಜ್ಯದಲ್ಲಿರುವ ಭಿಕ್ಷುಕರ ಕಾಲೋನಿಗಳ ಬಗ್ಗೆ

೧೦೫೫. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಭಿಕ್ಷುಕರ ಒಟ್ಟು ಕಾಲೋನಿಗಳೆಷ್ಟು ?

ಆ) ಅವುಗಳಲ್ಲಿ ಎಷ್ಟು ಮಂದಿ ಭಿಕ್ಷುಕರಿಗೆ ಆಶ್ರಯ ನೀಡಲಾಗಿದೆ ?

ಇ) ಭಿಕ್ಷುಕರ ಈ ಕಾಲೋನಿಗಳಿಗಾಗಿ ಸರ್ಕಾರದವರು ಪ್ರತಿ ವರ್ಷ ಮಾಡುತ್ತಿರುವ ವೆಚ್ಚ ವೆಷ್ಟು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೧೦ ಕಾಲೋನಿಗಳಿವೆ.

ಆ) ಜನವರಿ ೧೯೮೬ ರಿಂದ ಡಿಸೆಂಬರ್ ೧೯೮೬ರ ಅಂತ್ಯದವರೆಗೆ ೩,೬೦೬ ಮಂದಿ ಭಿಕ್ಷುಕರಿಗೆ ಆಶ್ರಯ ನೀಡಲಾಗಿದೆ.

ಇ) ೧೯೮೪-೮೫ರಲ್ಲಿ ... ರೂ.೩೩,೫೯,೩೦೫-೪೪
೧೯೮೫-೮೬ರಲ್ಲಿ ... ರೂ.೩೭,೮೩,೨೭೪-೨೪
೧೯೮೬-೮೭ರಲ್ಲಿ ... ರೂ.೨೦,೯೧,೬೧೯-೭೫
(ಡಿಸೆಂಬರ್ ಅಂತ್ಯದವರೆಗೆ).